ಮೂರು ಜನ ಹೆಜ್ಜೆ ಹಾಕಿದರು. ಅವರಲ್ಲಿ ಇಬ್ಬರು ಜೈಲಿನ ಕಾವಲುಗಾರರು. ಮತ್ತೊಬ್ಬ ಲೆನ್; ಕ್ಷಮಿಸಿ, ಅದು ಅವನ ಹಳೆಯ ಹೆಸರು. ಈಗ ಅವನು ಪೂಜನೀಯನಾದ ಲಿಯೊನಾರ್ಡ್ ವಿನ್‌ಸ್ಟನ್. ಅವನು ಬರಿಗಾಲಲ್ಲಿ ಕುಣಿಯುತ್ತಿದ್ದ ಬಾಲ್ಯದ ಆ ದಿನಗಳಿಂದಲೂ ಬೊನಿಫ್ಯಾಶೊನ ಗೆಳೆಯನಾಗಿದ್ದ; ಅಷ್ಟೇ ಅಲ್ಲ, ಇಬ್ಬರೂ ಅಕ್ಕಪಕ್ಕದ ಮನೆಯವರಾಗಿದ್ದರು.

ಲಿಯೊನಾರ್ಡ್ ಒಳಗೆ ಬಂದವನೆ ಮೊಟ್ಟ ಮೊದಲನೆಯದಾಗಿ ಬೊನಿಫ್ಯಾಶೊನ ಕೈಯನ್ನು ಗಟ್ಟಿಯಾಗಿ ಹಿಡಿದುಕೊಂಡ. ಆದರೆ ಒಂದೆರಡು ಕ್ಷಣವಷ್ಟೆ. ನಂತರ ಹೇಳಿದ: 'ನನ್ನನ್ನು ಅವರು ಜೈಲಿನ ಪಾದ್ರಿಯನ್ನಾಗಿ ತೆಗೆದುಕೊಳ್ಳುವಂತೆ ನೋಡಿಕೊಂಡೆ.' ಅವನು ಎಡಗೈಯಲ್ಲಿ ಬೈಬಲ್ಲಿನ ಚಿಕ್ಕ ಪ್ರತಿಯೊಂದನ್ನು ಹಿಡಿದಿದ್ದ ಮತ್ತು ಪುಟದ ಗುರುತಿಗಾಗಿ ತೋರು ಬೆರಳನ್ನು ನಡುವೆ ಇಟ್ಟುಕೊಂಡಿದ್ದ.

ಮರ್‍ರೆಗೆ ನಗು ಬಂತು, ಸಣ್ಣದಾಗಿ. ಅಮೇಲೆ ಮರ್‍ರೆ ಮೇಜಿನ ಮೇಲೆ ಹರಡಿಕೊಂಡಿದ್ದ ಎರಡುಮೂರು ಪುಸ್ತಕಗಳನ್ನು ಜೋಡಿಸಿಟ್ಟ; ಪೆನ್ನನ್ನೂ ಎತ್ತಿ ಸರಿಯಾಗಿಟ್ಟ. ಆ ಹೊತ್ತಿಗೆ ಏನನ್ನು ಹೇಳಿದರೆ ಸರಿಯಾದೀತು ಎಂದು ಸೂಚಿಸದೆ ಸುಮ್ಮನುಳಿದ.

ಜೇಲಿನ ಆ ಭಾಗವನ್ನು ಲಿಂಬೋಲೇನ್ ಎನ್ನುತ್ತಾರೆ. ಅದನ್ನು ಕೈದಿಗಳು ಚೊಕ್ಕ ಇರಿಸಿದ್ದರು. ಅದು 80x28 ಅಡಿ ಸೈಜಿನಲ್ಲಿತ್ತು. ಅದರ ಕಾಯಂ ಕಾವಲುಗಾರ ತನ್ನ ಜೇಬಿನಿಂದ ಒಂದು ಬಾಟಲಿ ವಿಸ್ಕಿಯನ್ನು ಹೊರತೆಗೆದು ಮರ್‍ರೆಗೆ ನೀಡಿದ. ಅವನು ಧಡೂತಿ ಶರೀರದಿಂದಾಗಿ ತಂಬಾ ಒರಟನಾಗಿ ಕಾಣುತ್ತಿದ್ದ. ಆದರೂ ತಿಳಿವಳಿಕೆಯಿದ್ದ ಮನುಷ್ಯ. ಬಾಟಲಿಯನ್ನು ಮರ್‍ರೆಗೆ ಕೊಟ್ಟು ಆತ ಹೇಳಿದ, 'ಇಲ್ಲಿ ಇದೆಲ್ಲ ಮಾಮೂಲು. ನಿನಗೂ ಗೊತ್ತಿರಬಹುದಲ್ಲ. ಸ್ವಲ್ಪ ಧೈರ್ಯ ಬೇಕೆನ್ನುವವರು ಇದನ್ನು ತೆಗೆದುಕೊಳ್ಳುವುದುಂಟು. ಅಂಥವರಿಗೆ ಇದು ರೂಢಿಯಾಗುವ ಅಪಾಯವಂತೂ ಇಲ್ಲ.'

ಮರ್‍ರೆ ಬಾಟಲಿಯನ್ನೆತ್ತಿ ಸೀದಾ ತನ್ನ ಗಂಟಲಿಗೆ ಸುರುವಿಕೊಂಡ. 'ಇದಪ್ಪ! ಹೀಗಿರಬೇಕು ನೋಡು.' ಕಾವಲುಗಾರ ಮೆಚ್ಚಿಗೆ ವ್ಯಕ್ತಪಡಿಸಿದ. 'ಧೈರ್ಯ ಬರಲೆಂದು ಇದೊಂದು ಸಣ್ಣ ಟಾನಿಕ್. ಆಮೇಲೆ ಎಲ್ಲಾ ಬಹಳ ಸಲೀಸಾಗುತ್ತದೆ.'

